ಮೆಟಲಿಂಗ್ ರಸ್ತೆ	145 ಕಿ.ಮೀ
ಕಚ್ಚಾ ರಸ್ತೆ	50 ಕಿ.ಮೀ.

ಅ) ಮೆಟಲಿಂಗ್ ರಸ್ತೆಯ ಡಾಂಬರೀಕರಣ ಹಾಗೂ ಡಾಂಬರ್ ರಸ್ತೆಗಳ ಪುನರಲೇಪನ ಮಾಡುವ ಕುರಿತು ಒಟ್ಟು ರೂ. 100.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಇಲ್ಲಿಯವರೆಗೆ 85.48 ಲಕ್ಷಗಳನ್ನು ವಿನಿಯೋಗಿಸಲಾಗಿದೆ. ಕಚ್ಚಾ ರಸ್ತೆಗಳನ್ನು 5 ವರ್ಷಗಳ ಕಾಲಾವಧಿಯಲ್ಲಿ ಮೆಟಲಿಂಗ್ ಮಾಡಿಸಲಾಗುವುದು. ಮಹಾನಗರಪಾಲಿಕೆಯು ರೂ. 16.53 ಲಕ್ಷ ವೆಚ್ಚದಲ್ಲಿ 8.79 ಕಿ.ಮೀ ಉದ್ದಳತೆಯ ರಸ್ತೆಗಳಿಗೆ ಮೆಟಲಿಂಗ್ ಮಾಡಿಸಲಾಗಿದೆ ಅಲ್ಲದೆ ರೂ. 28.79 ಲಕ್ಷ ಅಂದಾಜು ಮೊತ್ತದ 14.59 ಕಿ.ಮೀ ಉದ್ದಳತೆ ರಸ್ತೆಗಳಿಗೆ ಮೆಟಲಿಂಗ್ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) 18. ರೂ. 7.81 ಲಕ್ಷಗಳು.

ಹುಬ್ಬಳ್ಳಿ-ಧಾರವಾಡ ನಗರ ಸಭೆಗೆ ಸಂಬಂಧಿಸಿದಂತೆ ಕೊಳವೆ ಬಾವಿಗಳನ್ನು ಜೋಡಿಸುವ ಬಗ್ಗೆ

467 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಸೇರಿದ ಅವಳಿನಗರಕ್ಕೆ ಕನನೀನ ಮತ್ತು ಒಳಚರಂಡಿ ಮಂಡಳಿಯಿಂದ ಎಷ್ಟು ಕೊಳವೆ ಬಾವಿಗಳನ್ನು ಜೋಡಿಸಲಾಗಿದೆ. ಹಾಗೂ ಇವುಗಳಿಗೆ ತಗುಲಿದ ಖರ್ಚೆಷ್ಟು.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಸೇರಿದ ಅವಳಿನಗರಕ್ಕೆ ಕನನೀನ ಮತ್ತು ಒಳಚರಂಡಿ ಮಂಡಳಿಯಿಂದ ಇಲ್ಲಿಯವರೆಗೆ 532 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳಲ್ಲಿ 520 ಫಲ ಪ್ರದವಾಗಿದ್ದು 84 ಕೊಳವೆ ಬಾವಿಗಳನ್ನು ಕೈ ಪಂಪುಗಳಿಂದಲೂ ಮತ್ತು 36 ಕೊಳವೆ ಬಾವಿಗಳನ್ನು ವಿದ್ಯುತ್ ಪಂಪಗಳಿಂದಲೂ ಜೋಡಿಸಲಾಗಿದೆ. ಇವುಗಳಿಗೆ ಸುಮಾರು ರೂ. 230.28 ಲಕ್ಷ ಖರ್ಚಾಗಿದೆ.

ರಾಜ್ಯದಲ್ಲಿ ಚರ್ಮೋದ್ಯಮಕ್ಕೆ ಖರ್ಚಾದ ಹಣ

468 - ಶ್ರೀ ಅಶೋಕ ಎಸ್. ಕಾಟವೆ(ಹುಬ್ಬಳ್ಳಿನಗರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?